ದಿನಾಂಕಃ 28.01.2025 ರಂದು ಸಾಕ್ಷಿಗೆ ಪ್ರಮಾಣವಚನ ಮಾಡಿಸಲಾಯಿತು.

**ಪಾಟೀ ಸವಾಲುಃ 1(ಎ) ನೇ ಎದುರುದಾರರ ಪರಃ ಶ್ರೀ ಎನ್ ಎನ್ ಎಂ ವಕೀಲರಿಂದಃ**

1. ನಾನು ದ್ವಿ ಚಕ್ರ ವಾಹನದ ಶೋ ರೂಂ ಇಟ್ಟುಕೊಂಡಿರುತ್ತೇನೆ. ಅಪಘಾತವು ದಿಃ 18.12.2018 ರಂದು ಆಗಿರುತ್ತದೆ. ಅಪಘಾತದ ದಿನ ನಾನು ಎಳನೀರು ಕುಡಿಯಲು ಗೌರ್ಮೆಂಟ್ ಕಾಲೇಜಿನ ಹತ್ತಿರ ಇದ್ದು, ಅಪಘಾತವು ಮಧ್ಯಾಹ್ನ 2.15 ಗೆ ಆಗಿರುತ್ತದೆ. ಅಪಘಾತ ಸ್ದಳಕ್ಕೂ ಮತ್ತು ಶೋಂ ರೂಂ ನ ಮಧ್ಯೆ 100 ಮೀಟರ್ ಅಂತರ ಇರುತ್ತದೆ. ಸಲ್ಮಾನ್ ಮತ್ತು ಇನಾಯತ್ ಷರೀಫ್ ನನ್ನ ಶೋಂ ರೂಂ ನಲ್ಲಿ ಕೆಲಸ ಮಾಡುತ್ತಿದ್ದರು. ನಾನೇ ದೂರನ್ನು ನೀಡಿರುತ್ತೇನೆ. ದೂರನ್ನು ನೀಡುವಾಗ ನನ್ನೊಂದಿಗೆ ಒಬ್ಬ ಮೊಹಮಡನ್ ಆಸಾಮಿ ಇದ್ದು, ನನಗೆ ಆತನ ಹೆಸರು ನೆನಪಿಲ್ಲ. ಅಪಘಾತವನ್ನು ನಾನು ಕಣ್ಣಾರೆ ನೋಡಿರುವುದಿಲ್ಲ ಎಂದರೆ ಸರಿಯಲ್ಲ. ಅಪಘಾತದ ದ್ವಿ ಚಕ್ರ ವಾಹನವನ್ನು ಸಲ್ಮಾನ್ ಹುಸೇನ್ ಚಲಾಯಿಸುತ್ತಿದ್ದ. ಸಲ್ಮಾನ್ ಅವರ ಬಳಿ ಅಪಘಾತದ ದಿನ ಡಿ ಎಲ್ ಇರಲಿಲ್ಲ ಎಂದರೆ ಸರಿಯಲ್ಲ. ಸಲ್ಮಾನ್ ಗಾಡಿ ಲೋನ್ ಪಡೆಯಬೇಕಿದ್ದು, ಆಗ ನಾನು ಆತನ ಡಿ ಎಲ್ ಅನ್ನು ನೋಡಿರುತ್ತೇನೆ. ಅಪಘಾತದ ಸಮಯದಲ್ಲಿ ಸಲ್ಮಾನ್ ಮತ್ತು ಇನಾಯತ್ ಗಂಜಾಂ ಕಡೆಯಿಂದ ಕಾಲೇಜಿನ ಮುಂಭಾಗದ ಸರ್ವೀಸ್ ರಸ್ತೆಯಲ್ಲಿ ಬರುತ್ತಿದ್ದರು.

2. ಲಾರಿ ಎದುರುಬದಿಯಿಂದ ಅತಿವೇಗವಾಗಿ ಬಂದು ಮುಖಾಮುಖಿ ಸರ್ವೀಸ್ ರಸ್ತೆಯಲ್ಲಿ ಆಗಿರುತ್ತದೆ. ಲಾರಿ ಬರುತ್ತಿದ್ದ ಮುಖವಾಗಿ ರಸ್ತೆಯು ಏರುಮುಖವಾಗಿದೆ ಎಂದರೆ ಸಾಕ್ಷಿ ಸ್ವಲ್ಪ ಇದೆ ಎಂದು ನುಡಿಯುತ್ತಾರೆ. ಅಪಘಾತವಾದ ರಸ್ತೆಯು ಏರುಮುಖವಾಗಿರುವ ಕಾರಣ ಹಾಗೂ ಲಾರಿಯಲ್ಲಿ ಲೋಡ್ ಇದ್ದ ಕಾರಣ ಅದು ಅತಿವೇಗವಾಗಿ ಬರಲು ಸಾಧ್ಯವಿಲ್ಲ ಎಂದರೆ ಸಾಕ್ಷಿ ಲಾರಿ

ಅತಿವೇಗವಾಗಿಯೇ ಬರುತ್ತಿತ್ತು ಎಂದು ನುಡಿಯುತ್ತಾರೆ. ಸಲ್ಮಾನ್ ಬಳಿ ಡಿ ಎಲ್ ಇಲ್ಲದೇ ಇದ್ದು, ಆತನೇ ಬೇಜವಾಬ್ದಾರಿತನದಿಂದ ಸರ್ವೀಸ್ ರೋಡಿಗೆ ತಿರುಗಲು ಅತಿವೇಗವಾಗಿ ಬಂದು ಆತನೇ ಅಪಘಾತಪಡಿಸಿಕೊಂಡಿರುತ್ತಾನೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಅಪಘಾತವಾದಲ್ಲಿ ಲಾರಿಯ ಎಡಬದಿಗೆ ಜಖಂ ಗಳು ಆಗುತ್ತದೆ ಎಂದರೆ ಸಾಕ್ಷಿ ಅದು ಮಧ್ಯಭಾಗಕ್ಕೆ ಬಂದು ಡಿಕ್ಕಿ ಪಡಿಸಿದೆ ಎಂದು ನುಡಿಯುತ್ತಾರೆ. ಸಲ್ಮಾನೇ ದ್ವಿ ಚಕ್ರ ವಾಹನವನ್ನು ಬೇಜವಾಬ್ದಾರಿತನದಿಂದ ಚಲಾಯಿಸಿ ಲಾರಿ ಚಾಲಕನ ಮುಂಭಾಗಕ್ಕೆ ಬಂದು ಡಿಕ್ಕಿಪಡಿಸಿರುತ್ತಾನೆ ಎಂದರೆ ಸರಿಯಲ್ಲ. ಸಲ್ಮಾನ್ ಮತ್ತು ಇನಾಯತ್ ನನ್ನ ಬಳಿ ದಿನಗೂಲಿಗೆ ಕೆಲಸ ಮಾಡುತ್ತಿದ್ದರು. ಸಲ್ಮಾನ್ ಮತ್ತು ಇನಾಯತ್ ಸುಮಾರು 8-10 ತಿಂಗಳಿನಿಂದ ಕೆಲಸ ಮಾಡುತ್ತಿದ್ದರು. ಹೊಸದಾಗಿ ಯಾರನ್ನಾದರೂ ಕೆಲಸಕ್ಕೆ ಸೇರಿಸಿಕೊಂಡರೇ ನಾವು ಅವರ ಬಗ್ಗೆ ರಿಜಿಸ್ಟರ್ maintain ಮಾಡುತ್ತೇವೆ ಎಂದರೆ ಸರಿ. ನಾನು ಸದರಿ ರಿಜಿಸ್ಟರ್ ಅನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿಲ್ಲ. ನಮಗೆ ಆಗ ಕಂಪನಿಯಿಂದ authorisation ಸಿಗದ ಕಾರಣ ನಾನು ರಿಜಿಸ್ಟರ್ maintain ಮಾಡಿರಲಿಲ್ಲ, ಆದರೆ ಈಗ ಮಾಡುತ್ತಿದ್ದೇವೆ ಎಂದು ನುಡಿಯುತ್ತಾರೆ. ನಾನು 2016-17 ರಿಂದ ಶೋ ರೂಂ ಅನ್ನು ನಡೆಸುತ್ತಿದ್ದೇನೆ. ನನಗೆ 2019 ರಲ್ಲಿ authorisation ಸಿಕ್ಕಿರುತ್ತದೆ. ಸದರಿ authorisation ನನಗೆ mail ಮುಖಾಂತರ ಬಂದಿದ್ದು, ಅದು ಇದ್ದಲ್ಲಿ ಹಾಜರುಪಡಿಸುತ್ತೇನೆ.

3. ಅಪಘಾತವಾದಾಗ ಆಸ್ಪತ್ರೆಗೆ ನಾನೇ ಗಾಯಾಳುಗಳನ್ನು ಶ್ರೀರಂಗಪಟ್ಟಣ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ. ಅಪಘಾತ ಸಮಯದಲ್ಲಿ ಯಾರು ಹೆಲ್ಮೆಟ್ ಧರಿಸಿರಲಿಲ್ಲ ಎಂದರೆ ಸರಿಯಲ್ಲ. ನನಗೆ ಸಲ್ಮಾನ್ ಚಲಾಯಿಸುತ್ತಿದ್ದ ದ್ವಿ ಚಕ್ರ ವಾಹನದ ಸಂಖ್ಯೆ ನೆನಪಿಲ್ಲ ಆದರೆ ಅದು ಹೀರೋ ಪ್ಲೆಜರ್ ವಾಹನವಾಗಿತ್ತು. ಅಪಘಾತವನ್ನು ನಾವು

ನೋಡಿರುವುದಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರರು ನನ್ನ ಪರಿಚಯಸ್ಥರಾಗಿದ್ದು, ಅವರಿಗೆ ಪರಿಹಾರ ಕೊಡಿಸಬೇಕೆಂಬ ದುರುದ್ದೇಶದಿಂದ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತವು ಸಲ್ಮಾನ್ ನ ತಪ್ಪಿ ನಿಂದ ಆಗಿರುವ ಕಾರಣ 1ನೇ ಎದುರುದಾರರು ಯಾವುದೇ ಪರಿಹಾರ ಕೊಡಲು ಬಾಧ್ಯರಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

*ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.*

ಓ ಹೇ ಕೇ ಸ ಇ ಒ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಶ್ರೀರಂಗಪಟ್ಟಣ.